# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-172 ಮಡಿವಾಳ ಕಛೇರಿಯಲ್ಲಿ ದಿನಾಂಕ: 20.11.2021 ರಂದು ನಡೆದ ವಾರ್ಡ್ ಸಮಿತಿ ಸಭೆ ನಡವಳಿಗಳು.

ಹಾಜರಿದ್ದ ಅಧಿಕಾರಿಗಳ ವಿವರಗಳು

1. ಶ್ರೀ. ಹೆಚ್.ಸಿ. ಶಿವರಾಮು, ಉಪ ನಿಯಂತ್ರಕರು ಹಣಕಾಸು (ಮಹದೇವಪುರ ವಲಯ)ವಾರ್ಡ್-172 ನೋಡಲ್ ಅಧೀಕಾರಿ.
2. ಶ್ರೀ ಸಿದ್ಧಣ್ಣ.ವಿ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕಅಭಿಯಂತರರು ವಾರ್ಡ್-172 ಮಡಿವಾಳ
3. ಶ್ರೀ.ಮೊಹಮ್ಮದ್ ಹೈದರ್ ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 172
4. ಶ್ರೀ. ಮೌನೇಶ್ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ 172
5. ಶ್ರೀ. ಹರೀಶ್, ಎ.ಇ.(ಬಿಡಬ್ಲೂ.ಎಸ್.ಎಸ್.ಬಿ)
6. ಶ್ರೀ.ಗಂಗಣ್ಣ, ಮದ್ದೂರಮ್ಮ ಕಾಲೋನಿ, ಸದಸ್ಯರು
7. ಶ್ರೀ. ಶ್ರೀನಿವಾಸ್‌ರೆಡ್ಡಿ, ವೆಂಕಟೇಶ್ವರ ಲೆಔಟ್, ಸದಸ್ಯರು
8. ಶ್ರೀ ಮಂಜುನಾಥ್, ಕ್ಯಾಪಿಯರ್ ಲೇಔಟ್ ಅಸೋಸಿಯೆಷನ್

* * * * * *

ದಿನಾಂಕ-20-11-2021 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟನಲ್ಲಿ ಮತ್ತು ಅಭಿವೃದ್ದಿ ಕಾಮಗಾರಿಗಳನ್ನು ನಿರ್ವಹಿಸಲಾಗಿರುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ, ಹೊಸದಾಗಿ ನಿಯೋಜನೆಗೊಂಡ ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಕಳೆದ ವಾರ್ಡ್ ಸಮಿತಿ ಸಭೆಯ ವರದಿಯನ್ನು ಚಚಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನಿಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ರಸ್ತೆ ಗುಂಡಿಗಳು.

ಹಾಲಿ ನಗರದಲ್ಲಿ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳು ಕಂಡುಬಂದಿರುತ್ತದೆ. ಸದರಿ ಗುಂಡಿಗಳನ್ನು ತ್ವರಿತಗತಿಯಲ್ಲಿ ಮುಚ್ಚಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕಾಗಿ ಹಾಜರಿದ್ದ ವಾರ್ಡ್‌ನ ಸಹಾಯಕ ಅಭಯಯಂತರರಿಗೆ ಸೂಚಿಸಲಾಗಿತ್ತು.

ಈ ಕುರಿತಂತೆ ಸಹಾಯಕ ಅಭಿಯಂತರರು ಮಾತನಾಡಿ ರಸ್ತೆಅಗೆತದ ಎಲ್ಲಾಗುಂಡಿಗಳು ಹಾಗೂ ಬಿಡಬ್ಲೂ.ಎಸ್.ಎಸ್.ಬಿ/ ಇತರೆ ಇಲಾಖೆಯಿಂದು ಕೈಗೊಂಡ ಎಲ್ಲಾ ಗುಂಡಿ ಮತ್ತು ರಸ್ತೆ ಅಗೆತಗಳನ್ನು ಮುಚ್ಚಲು ಅಗತ್ಯ ಕ್ರಮ ಕೈಗೊಳ್ಳಗಿದೆ

ಬಿಡಬ್ಲೂ.ಎಸ್.ಎಸ್.ಬಿ ಇಲಾಖೆಯ ಸಹಾಯಕ ಅಭಿಯಂತರರಾದ ಶ್ರೀ ಹರಿಶ್‌ರವಗರು ಮಾತನಾಡಿ ನಮ್ಮ ಇಲಾಖೆವತಿಯಿಂದ ಕೈಗೊಳ್ಳಲಾದ ಎಲ್ಲಾ ರಸ್ತೆ ಅಗೆತಗಳನ್ನು ಮರು ನಿರ್ಮಾಣಮಾಡಲಾಗಿರುತ್ತದೆ.

2. ಅನಧೀಕೃತ ಕಟ್ಟಡಗಳು.

ವಾರ್ಡ್‌ನ ಪರಿವೀಕ್ಷಣೆಯ ರಸ್ತೆಗಳಲ್ಲಿ ಹಲವಾರು ಕಟ್ಟಡಗಳು ನಿರ್ವಾಣವಾಗುತ್ತಿದ್ದು ಸದರಿ ಕಟ್ಟಡಗಳ ಮಂಜೂರಾಗಿ ನಕ್ಷೆಗಳನ್ನು ಪರಿಶೀಲಿಸಲು ಮತ್ತು ಅನಧೀಕೃತ ಕಟ್ಟಡಗಳ ವಿರುದ್ದು ಕಟ್ಟುನಿಟ್ಟಿನ ಕ್ರಮಗಳನ್ನು ಕೆ.ಎಂ.ಸಿ ಕಾಯ್ದೆ ಅನ್ವಯ ನೊಟೀಸ್‌ಗಲನ್ನು ಜಾರಿಗೊಳಿಸಲಾಗಿದೆ.

3. ಬಿದಿ ದೀಪಗಳ ನಿರ್ವಹಣೆ ಬಗ್ಗೆ.

ಕಳೆದ ಸಭೆಯಲ್ಲಿ ಚರ್ಚಿಸಲಾಗಿದ್ದ ಆಕ್ಸಾ ಬಿಲ್ಡಿಂಗ ಹಿಂಭಾಗ, ಕ್ಯಾಶೀಯರ್ ಬಡಾವಣೆಯಲ್ಲಿ ಬೀದಿ ದೀಪಗಳ ಸಮಸ್ಯೆ ಇದ್ದು, ಸದರಿ ಸಮಸ್ಯೆಗಳ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಹಾಜರಿದ್ದ ನಾಗರೀಕರು ಮನವಿಮಾಡಿರುತ್ತಾರೆ.

ಈ ಸಂಬಂಧ ವಾರ್ಡ್ ಅಭಿಯಂತರರರು ಸಂಬಂಧ ಪಟ್ಟ ಇಲಾಖೆಯಿಂದ ಅಗತ್ಯ ಕ್ರಮಗಳು ಕೈಗೊಳ್ಳಲಾಗಿದೆ.



Scanned with CamScanner

ಈ ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ 17ನೇ ಮುಖ್ಯರಸ್ತೆ ಮತ್ತು 3ನೇ ಅಡ್ಡರಸ್ತೆ ಕ್ಯಾಶೀಯರ್ ಬಡಾವಣೆಯ ರಸ್ತೆಗಳಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಹಾಗೂ ಸಮರ್ಪಕವಾಗಿ ನಿರ್ವಹಣೆಯಾಗುತ್ತಿಲ್ಲವೆಂದು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಲು ಅಲ್ಲಿನ ನಾಗರೀಕರು ದೂರಿರುತ್ತಾರೆ.

ಈ ಸಬಂಧ ಸಭೆಯ ಅಧ್ಯಕ್ಷರು ಮಾತನಾಡಿ ಸಂಬಂಧ ಪಟ್ಟ ಇಲಾಖೆಯಿಂದ ಅಗತ್ಯಕ್ರಮ ಜರುಗಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

4. ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಕಳೆದ ಸಮಿತಿ ಸಭೆಯಲ್ಲಿ ಚರ್ಚಿಲಾಗಿದ್ದ, ವಾರ್ಡ್ ವ್ಯಾಪ್ತಿಯಲ್ಲಿ ಒಣ ಕಸ ಹಾಗೂ ಹಸಿಕಸವನ್ನು ಸಮರ್ಪಕವಾಗಿ ವ್ಯವಸ್ಥಿತ ಪದ್ಧತಿಯನ್ನು ಅಳವಡಿಸಿ ಕಸಮುಕ್ತ ವಾರ್ಡ್‌ನ್ನು ನಿರ್ಮಾಣ ಮಾಡುವ ಸಲುವಾಗಿ ಸೂಕ್ತಕ್ರಮಗಳನ್ನು ಕೈಗೊಳ್ಳಲು ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚನೆಯನ್ನು ನೀಡಲಾಗಿತ್ತು.

ಈ ಸಂಬಂಧ ಕಿರಿಯ ಆರೋಗ್ಯ ಪರಿವೀಕ್ಷಕರಿಂದ ಅಗತ್ಯ ಕ್ರಮಗಳು ಕೈಗೊಳ್ಳಲಾಗಿದೆ.

ಈ ಸಭೆಯಲ್ಲಿ ಅಧ್ಯಕ್ಷರು ಮಾತನಾಡಿ ವಾರ್ಡ್ ವ್ಯಾಪ್ತಿಯ ವೆಂಕಟೇಶ್ವರ ಬಡಾವಣೆಯ ಉದ್ಯಾನವದ ಸುತ್ತ ಮುತ್ತ ಕಸವನ್ನು ಬಿದ್ದಿದ್ದು ಸಮರ್ಪಕವಾಗಿ ವಿಲೇವಾರಿಯಾಗುತ್ತಿರುವುದಿಲ್ಲ ಮತ್ತು ವಾರ್ಡ್‌ನ ಅನೇಕ ಮುಖ್ಯ ಹಾಗೂ ಇತರೆ ರಸ್ತೆಗಳಲ್ಲಿ ಸಮರ್ಪಕವಾ ಕಸವಿಲೇವಾರಿಯಾಗುತ್ತಿರುವುದಿಲ್ಲ ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷರಿಗೆ ಅಗತ್ಯ ಕ್ರಮಗಳು ಕೈಗೊಳ್ಳಲು ಸೂಚಿಸಲಾಯಿತು.

5. ಕೋವಿಡ್-19 ಸೊಂಕು ಹರಡದಂತೆ ನಿರ್ವಹಣೆ ಮಾಡುವ ಬಗ್ಗೆ:-

ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳು ಜಾಗೃತಿ ಮೂಡಿಸಬೆಕು ಹಾಗೂ ಮಾಸ್ಕ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದು ವಾರ್ಡ್ ಸದಸ್ಯರು ರವರಿಗೆ ಸೂಚಿಸಿದರು.

6. 2021-22ನೇ ಸಾಲಿನ ಕೊಳವೆಬಾವಿಗಳ ನಿರ್ವಹಣೆ ಮತ್ತು ದುರಸ್ಥಿ ಕಾಮಗಾರಿ ಹಾಗೂ ರಸ್ತೆ ನಿರ್ವಹಣೆ ಮತ್ತು ಚರಂಡಿಯಲ್ಲಿ ಹೂಳೆತ್ತುವ ಕಾಮಗಾರಿಗಳ ಬಗ್ಗೆ

ಸಭೆಯ ಕಾರ್ಯದರ್ಶಿಯವರು ಮಾತನಾಡಿ, ಮೇಲ್ಕಂಡ ವಿಷಯದ ಬಗ್ಗೆ ಈ ಕೆಳಗೆ ನಮೂದಿಸಿರುವ 3 ಕಾಮಗಾರಿಗಳನ್ನು ನಿರ್ವಹಿಸುವಸಲುವಾಗಿ ಹಾಗೂ ಮಾನ್ಯ ಮುಖ್ಯ ಅಭಿಯಂತರರು ರವರ ಟಿಪ್ಪಣಿ ಹಾಳೆಯ ಆದೇಶದ ಸಂಖ್ಯೆ ಮು.ಅ(ದ)/ಜಿ.ಎಲ್/770/21-22 ರ ಆದೇಶದನ್ವಯ ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತಾದೃಷ್ಟಿ ಮೇರೆಗೆ ಅತೀ ಜರೂರ್‌ಆಗಿ ನಿರ್ವಹಿಸಬೇಕಾಗಿರುವುದರಿಂದ ವಾರ್ಡ್ ಕಮಿಟಿಯ ಎಲ್ಲಾ ಸದಸ್ಯರಮುಂದೆ ಪ್ರಸ್ತಾಪಿಸಲಾಗಿ, ಸಹಮತವು ಸಹ ದೊರೆತ್ತಿರುತ್ತದೆ.

1) **Annual Maintenance of Borewells and Water Supply lines in ward No 172 Madiwala – 20.00 Lakhs**
2) **Maintenance of Footpath drains and reasphalting of damaged roads in ward No 172 Madiwala – 20.00 Lakhs**
3) **Filling of potholes in ward jurisdiction in ward No 172 Madiwala- 20.00 Lakhs**

ಕೊನೆದಾಗಿ ಸಭೆಯ ಅಧ್ಯಕ್ಷರು ಮಾತನಾಡಿ ಹಾಲಿ ಭಾರಿ ಮಳೆ ಸುರಿಯುತ್ತಿರುವುದರಿಂದ ವಾರ್ಡ್ ಮಟ್ಟದಲ್ಲಿ ಗಿಡ ಮರಗಿಡಗಳು ಬಿಳುವಂತ ಸಂಭವ ಹೆಚ್ಚಾಗಿರುತ್ತದೆ ಮತ್ತು ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲುವಂತಹ ಪ್ರದೇಶಗಳನ್ನು ಗುರುತಿಸಿ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಬೇಕು ಹಾಗೂ ನೈಟ್ ಕಂಟ್ರೋಲ್ ರೂಮ್ ಸ್ಥಾಪಿಸಿದ ವಿವರಗಳು ಮತ್ತು ವಾರ್ಡ್ ಮಟ್ಟದ ಎಲ್ಲಾ ರಸ್ತೆಗಳ ಚಂಡಿಯ ಶೋಲ್ಡರ್‌ಗಳನ್ನು ಸ್ವಚ್ಚಗೊಳಿಸಿ ಮಳೆನೀಡು ಸರಾಗವಾಗಿ ಚರಂಡಿಗೆ ಹರಿವಂತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು/ನೋಡಲ್ ಅಧಿಕಾರಿಗಳು,
ವಾರ್ಡ್ ಸಂಖ್ಯೆ:172, ಮಡಿವಾಳ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.



Scanned with CamScanner

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ

Scanned with CamScanner